Time : 3 Hours **KANNADA (T.L.)**

**Subject Code**

| S | 1 | 1 | 3 | 6 |
|---|---|---|---|---|

**Total No. of Questions : 52 (Printed Pages : 10) Maximum Marks : 80**

ಸೂಚನೆ – (*i*) ಎಲ್ಲ ಪ್ರಶ್ನೆಗಳ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.

(*ii*) ಎಲ್ಲ ಪ್ರಶ್ನೆಗಳನ್ನು ಬಿಡಿಸುವುದು ಅವಶ್ಯವಾಗಿದೆ.

(*iii*) ಬಹು ಆಯ್ಕೆ ಪ್ರಶ್ನೆಗಳ ಸಂಖ್ಯೆಗಳು **1** ರಿಂದ **6, 11** ರಿಂದ **14, 25** ರಿಂದ **38.**

(*iv*) ಒಂದು ಅಂಕದ ಪ್ರಶ್ನೆಗಳ ಸಂಖ್ಯೆಗಳು **7** ರಿಂದ **10, 19** ರಿಂದ **22** ಮತ್ತು **39** ರಿಂದ **40.**

(*v*) ಎರಡು–ಮೂರು ವಾಕ್ಯದ ಪ್ರಶ್ನೆಗಳ ಸಂಖ್ಯೆಗಳು **23** ಮತ್ತು **24.**

(*vi*) ಮೂರು–ನಾಲ್ಕು ವಾಕ್ಯದ ಪ್ರಶ್ನೆಗಳ ಸಂಖ್ಯೆಗಳು **15** ರಿಂದ **17.**

(*vii*) ಆಯ್ಕೆ ಪ್ರಶ್ನೆಗಳ ಸಂಖ್ಯೆಗಳು **18** ಮತ್ತು **41** ರಿಂದ **44.** (ನಿಬಂಧ ಲೇಖನ ಪತ್ರಲೇಖನ)

(*viii*) ರಚನೆಯ ಪ್ರಶ್ನೆ ಸಂಖ್ಯೆ **45.**

(*ix*) ಗದ್ಯಖಂಡ ಲೇಖನದ ಪ್ರಶ್ನೆಗಳ ಸಂಖ್ಯೆಗಳು **46** ರಿಂದ **50.**

(*x*) ಕವಿತೆಯ ಸರಳ ಅರ್ಥದ ಪ್ರಶ್ನೆಗಳ ಸಂಖ್ಯೆಗಳು **51** ರಿಂದ **52.**

* ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ ಒಂದನ್ನು ಅರಿಸಿ ವಾಕ್ಯ ಪೂರ್ಣಮಾಡಿ ಬರೆಯಿರಿ. 1×2=2

1. ರಾಧ ಪಶ್ಚಾತ್ತಾಪಪಟ್ಟು “ತಾನು ಅನ್ಯಾಯಕ್ಕೆ ಅನೀತಿಗೆ ಪ್ರೋತ್ಸಾಹಿಸಿದೆ ನನ್ನನ್ನು ಕ್ಷಮಿಸಿರಿ” ಎಂದು ಗಂಡನ ಹತ್ತಿರ ಕ್ಷಮೆ ಕೇಳಲು ಕಾರಣವೇನೆಂದರೆ ..............................................

- ಅವಳಿಗೆ ನಿಯತ್ತಿನ ಮೌಲ್ಯ ತಿಳಿಯಿತು.
- ಗಂಡನು ಸಿಟ್ಟಿನಿಂದ ಮನೆಬಿಟ್ಟು ಹೋಗಲು ಹೊರಟಿದ್ದನು.
- ಗಂಡನು ಅವಳನ್ನು ಮನೆಯಿಂದ ಹೋಗಲು ಹೇಳಿದ್ದನು.

2. ಅಶೋಕನು ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರೆಯನ್ನು ಶ್ರೀಲಂಕಾ ದೇಶಕ್ಕೆ ಕಳುಹಿಸಿಕೊಟ್ಟನು ಏಕೆಂದರೆ ......................................

- ಅವರ ಶಿಕ್ಷಣ ಮುಂದು ವರೆಸಲು
- ಬೌದ್ಧಧರ್ಮದ ಪ್ರಚಾರ ಮಾಡಲು
- ಸಂಬಂಧಿಕರನ್ನು ಭೇಟಿಯಾಗಲು

* ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು/ಕೇಳಿದರು : 1×4= 4

3. "ಬನ್ನಿ ಅಣ್ಣಾ! ಬಡವರ ಮನೆಗೆ ಭಾಗ್ಯಲಕ್ಷ್ಮೀ ಬಂದಂತಾಯಿತು"

- ಈ ಮಾತನ್ನು ಮಾಲತಿ ರಾಜುನಿಗೆ ಹೇಳದಳು
- ಈ ಮಾತನ್ನು ರಾಧಾ ರಮೇಶನಿಗೆ ಹೇಳಿದಳು
- ಈ ಮಾತನ್ನು ರಾಜು ರಮೇಶನಿಗೆ ಹೇಳಿದನು.

4. "ಉಳಿತಾಯ ಖಾತೆ ಎಂದರೇನು ಸರ್ ?"

- ಈ ಮಾತನ್ನು ಸಂಗೀತಾ ಗುರುಗಳಿಗೆ ಕೇಳಿದಳು
- ಈ ಮಾತನ್ನು ಶಿಕ್ಷಕರು ಶಾಖಾಧಿಕಾರಿಗೆ ಕೇಳಿದರು
- ಈ ಮಾತನ್ನು ಸಂಗೀತಾ ಶಾಖಾಧಿಕಾರಿಗೆ ಕೇಳಿದಳು

5. "ಅಪ್ಪಾ ಸಮತೋಲ ಆಹಾರ ಎಂದರೇನು ?"

- ಈ ಮಾತನ್ನು ತಂದೆ ಶಂಕರನಿಗೆ ಕೇಳಿದನು
- ಈ ಮಾತನ್ನು ಶಂಕರನು ತಂದೆಗೆ ಕೇಳಿದನು
- ಈ ಮಾತನ್ನು ತಂದೆ ವೈಶಾಲಿಗೆ ಹೇಳಿದನು

6. "ಈ ಹುಳಗಳಿಗೆ ಬಾಕಿ ಹುಳು ಅಥವಾ ಲಾರ್ವ ಎನ್ನುತ್ತಾರೆ"

- ಈ ಮಾತನ್ನು ನಾಗಣ್ಣನು ವೈಶಾಲಿ ಸಚಿನನಿಗೆ ಹೇಳಿದನು
- ಈ ಮಾತನ್ನು ತಾಯಿ ವೈಶಾಲಿಗೆ ಹೇಳಿದಳು
- ಈ ಮಾತನ್ನು ತಂದೆ ವೈಶಾಲಿಗೆ ಹೇಳಿದನು

* ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 1×4=4

7. ಎಮ್ಮೆ ಕರುವನ್ನು ಎಲ್ಲಿ ಕಟ್ಟಿದರು ?

8. ರೇಷ್ಮೆ ಹುಳುಗಳ ಆಹಾರ ಯಾವುದು ?

9. ಗಣೇಶ ಹಾಗೂ ಜೈನಮಂದಿರಗಳು ಯಾವ ಗುಡ್ಡದಲ್ಲಿವೆ ?

10. ಸಾಬ್ರಿ ವಿಮಾನಗಳು ಯಾವ ನಗರದ ಮೇಲೆ ದಾಳಿ ಮಾಡಿದವು ?

* ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ ಉತ್ತರವನ್ನು ಆರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ : ½×4=2

11. ಯಂಕಣ್ಣನು ................................ ಸ್ವಭಾವದವನಿದ್ದನು.
    - ಸಿಟ್ಟಿನ
    - ಸರಳ
    - ಕಠಿಣ

12. ತರಕಾರಿಗಳನ್ನು ................................ ಎಂದು ಕರೆಯುತ್ತಾರೆ.
    - ಚಿನ್ನ
    - ಹಾಲು–ಹೈನ
    - ಗೃಹವೈದ್ಯ

13. ಅಶೋಕನು ................................ ಧರ್ಮವನ್ನು ಸ್ವೀಕರಿಸಿದನು.
    - ಕ್ರೈಸ್ತ
    - ಹಿಂದೂ
    - ಬೌದ್ಧ

14. ನಮ್ಮ ರಕ್ಷಣೆಗಾಗಿ ................................ ಪ್ರಾಣದ ಬಲಿದಾನ ನೀಡುತ್ತಿದ್ದಾರೆ.
    - ಸಿನೇಮಾ ನಟರು
    - ಸೈನಿಕರು
    - ಚಾಲಕರು

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 3×3=9

15. ಜೋಗಜಲಪಾತದ ನಾಲ್ಕು ಕವಲುಗಳು ಯಾವವು ? ಅದರ ವಿಶೇಷತೆಯನ್ನು ಬರೆಯಿರಿ.

16. ಸರದಾರ ಪಟೇಲರು ಗೃಹಮಂತ್ರಿಯಾದಾಗ ಕೈಗೊಂಡ ಮಹತ್ವದ ಕಾರ್ಯ ಯಾವದು ?

17. ಓಝೋನ ಪದರವು ಜೀವಸಂಕುಲಕ್ಕೆ ಹೇಗೆ ಸಹಾಯ ಮಾಡುತ್ತದೆ ?

* ಈ ಕೆಳಗಿನ ಯಾವುದೇ ಒಂದು ಪ್ರಶ್ನೆಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1×4=4

18. ಜನಸಂಖ್ಯಾ ಸ್ಫೋಟದ ದುಷ್ಪರಿಣಾಮಗಳ ಕುರಿತು ಬರೆಯಿರಿ.

(ಅಥವಾ)

ಪ್ರಥಮ ಬಾರಿಗೆ ಅತ್ತೆಯ ಮನೆಗೆ ಹೊರಟ ಯಂಕಣ್ಣನ ಸಿಂಗಾರ ಹೇಗಿತ್ತು ?

* ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ : 1×4=4

19. ಗಿಳಿಗಳ ಮಾತುಗಳು ಹೇಗಿರುತ್ತವೆ ?

20. ವಿಜ್ಞಾನವು ಯಾವುದನ್ನು ಗೆಲ್ಲುತ್ತದೆ ?

21. ಹುಟ್ಟುವಾಗಿನ ಬಿದಿರಿನ ರೂಪ ಯಾವುದು ?

22. ಸುಗ್ಗಿಯು ರೈತನಿಗೆ ಯಾವ ಸುಖವನ್ನು ನೀಡುತ್ತದೆ ?

* ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ : 2×2=4

23. ಬೂದಿಯು ಹೊಳೆಯಲ್ಲಿ ಬಿದ್ದರೆ ಏನಾಗುವದು ?

24. ಒಂದೇ ಗೊಂಚಲಿನ ಹಣ್ಣುಗಳು ಹೇಗಿರುತ್ತವೆ ?

* ಕೆಳಗಿನ ಶಬ್ದಗಳ ಅರ್ಥ ಬರೆಯಿರಿ : 1×2=2

25. "ಉಡುಗೊರೆ" ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.

- ಕಾಣಿಕೆ
- ಬಳುವಳಿ
- ಬಹುಮಾನ

26. "ಬಲಿದಾನ" ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.

- ಉಸಿರಾಟ
- ಮರಣ
- ಪ್ರಾಣತ್ಯಾಗ

* ಕೆಳಗಿನ ವಿಶೇಷಣ ಶಬ್ದಗಳನ್ನು ಗುರುತಿಸಿ ಬರೆಯಿರಿ : 2×1=2

27. "ಮಗು ಒಂದೇ ಸಮನೆ ಅಳುತ್ತಿತ್ತು."

- ಅಳುತ್ತಿತ್ತು
- ಮಗು
- ಒಂದೇ ಸಮನೆ

28. ಕವಿತಾ ಭಕ್ತಿಗೀತೆಯ ಹಾಡನ್ನು ಇಂಪಾಗಿ ಹಾಡುತ್ತಾಳೆ.

- ಇಂಪಾಗಿ
- ಕವಿತಾ
- ಹಾಡನ್ನು

29. "ಮನೆಯಲ್ಲಿ" ಸಂಧಿ ವಿಗ್ರಹಿಸಿ ಬರೆದ ಶಬ್ದವನ್ನು ಗುರುತಿಸಿ ಬರೆಯಿರಿ. 1×1=1

- ಮನೆ + ಅಲ್ಲಿ
- ಮನೆ + ಯಲ್ಲಿ
- ಮನೆ + ಇಲ್ಲಿ

30. "ದೇವಾಲಯ" ಸಂಧಿ ವಿಗ್ರಹಿಸಿ ಬರೆದ ಶಬ್ದವನ್ನು ಗುರುತಿಸಿ ಬರೆಯಿರಿ. 1×1=1

- ದೇವಾ + ಲಯ
- ದೇವಾ + ಆಲಯ
- ದೇವಆ + ಲಯ

31. "ಪತಂಗ" ಈ ಶಬ್ದದ ಬಹುವಚನ ರೂಪ ಗುರುತಿಸಿ ಬರೆಯಿರಿ. 1×1=1

- ಪತಂಗ
- ಪತಂಗಗಳು
- ಪಾತರಗಿತ್ತಿ

32. "ನದಿಗಳು" ಈ ಶಬ್ದದ ಬಹುವಚನ ರೂಪ ಗುರುತಿಸಿ ಬರೆಯಿರಿ. 1×1=1

- ನದಿಯಲ್ಲಿ
- ಕೆರೆ
- ನದಿ

33. "ಲೇಖಕ" ಈ ಶಬ್ದದ ಸ್ತ್ರೀಲಿಂಗ ರೂಪ ಗುರುತಿಸಿ ಬರೆಯಿರಿ. 1×1=1

- ಲೇಖನ
- ಕವಿ
- ಲೇಖಕಿ

34. "ಸಹೋದರ" ಈ ಶಬ್ದದ ಸ್ತ್ರೀಲಿಂಗ ಗುರುತಿಸಿ ಬರೆಯಿರಿ. 1×1=1

- ಅಣ್ಣ
- ಸಹೋದರಿ
- ಸಹೋದರರು

35. "ಉತ್ಸಾಹ" ಈ ಶಬ್ದದ ವಿರುದ್ಧಾರ್ಥ ಶಬ್ದ ರುಗುತಿಸಿ ಬರೆಯಿರಿ. 1×1=1

- ಆಸಕ್ತಿ
- ಹೊರಪು
- ನಿರುತ್ಸಾಹ

36. “ಮೇಲೆ” ಈ ಶಬ್ದದ ವಿರುದ್ಧಾರ್ಥಕ ಶಬ್ದ ಗುರುತಿಸಿ ಬರೆಯಿರಿ. 1×1=1

- ಒಳಗೆ
- ಕೆಳಗೆ
- ಆಚೆಗೆ

37. “ಗಣೇಶ” ಈ ಶಬ್ದದ ಸಮನಾರ್ಥಕ ಶಬ್ದ ಗುರುತಿಸಿ ಬರೆಯಿರಿ. 1×1=1

- ಆನೆ
- ಗಣಪತಿ
- ಮಂಗ

38. “ಪರ್ವತ” ಈ ಶಬ್ದದ ಸಮನಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ. 1×1=1

- ಹೊಂಡ
- ಶಿಖರ
- ತಗು

39. “ಕಣ್ಣುತೆರೆ” ಈ ಶಬ್ದವನ್ನು ತಮ್ಮ ಸ್ವಂತಃ ವಾಕ್ಯದಲ್ಲಿ ಬರೆಯಿರಿ. 1

40. “ಕಿರುಚು” ಈ ಶಬ್ದವನ್ನು ತಮ್ಮ ಸ್ವಂತಃ ವಾಕ್ಯದಲ್ಲಿ ಬರೆಯಿರಿ. 1

* ಕೆಳಗಿನ ಶಬ್ದಗಳನ್ನು ಗಾದೆ ಮಾತುಗಳ ಸರಳಾರ್ಥ ಬರೆಯಿರಿ. 1×2=2

41. ಆಳಾಗಿದುಡಿ ಅರಸನಾಗಿ ಉಣ್ಣು.

(ಅಥವಾ)

ಅಚಾರವೇ ಸ್ವರ್ಗ ಅನಾಚಾರವೇ ನರಕ.

42. ಒಗ್ಗಟ್ಟಿನಲ್ಲಿ ಬಲವಿದೆ.

(ಅಥವಾ)

ವಿದ್ಯೆ ಇಲ್ಲದವನ ಬಾಳು ಹದ್ದಿಗಿಂತ ಕಡೆ.

* ಕೆಳಗಿನವುಗಳಲ್ಲಿ ಯಾವುದೇ ಒಂದು ವಿಷಯದ ಕುರಿತು ಹದಿನೈದು – ಇಪ್ಪತ್ತು ವಾಕ್ಯಗಳಲ್ಲಿ ನಿಬಂಧ ಬರೆಯಿರಿ : 1×6=6

43. ಸ್ವಾಮಿ ವಿವೇಕಾನಂದ

(ಅಥವಾ)

ಮೊಬೈಲಿನ ಆತ್ಮಕಥೆ

(ಅಥವಾ)

ಮಳೆಗಾಲದ ದೃಶ್ಯ

* ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಯನ್ನು ಆಧರಿಸಿ ಪತ್ರ ಬರೆಯಿರಿ : 1×6=6

44. ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಪಾತೊರ್ಡಾ, ಮಡಗಾಂವ ಗೋವಾ, ನಾಗರಿಕರು ಮಡಗಾಂವ ಗೋವಾ ನಗರಿಕರು ಮಡಗಾಂವ ಬಸ್ಸ ಡಿಪೋ ಮ್ಯಾನೆಜರ ಇವರಿಗೆ ವಿನಂತಿನಿ ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

(ಅಥವಾ)

ಶಾಲೆಯ ಮುಖ್ಯಾಧ್ಯಾಪಕರಿಗೆ ತಂದೆಯ ಅನಾರೋಗ್ಯದ ಸಲುವಾಗಿ ಊರಿಗೆ ಹೋಗಲು ವಿನಂತಿಸಿ ಪತ್ರ ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

45. ಕೆಳಗಿನ ವಾಕ್ಯಾಂಶಗಳ ಸಹಾಯದಿಂದ ಒಂದು ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಯೋಗ್ಯ ತಲೆಬರಹ ನೀಡಿರಿ. 1×6=6

ಒಬ್ಬ ಟೋಪಿ ಮರುವವನು —— ಮಧ್ಯಾಹ್ನದ ವೇಳೆಗೆ —— ಒಂದು ಮರದ ಕೆಳಗೆ ಮಲಗಿದನು.

ಆ ಮರದ ಮೇಲೆ ಅನೇಕ ಮಂಗಗಳು —— ಟೋಪಿಗಳನ್ನು ಎತ್ತಿಕೊಂಡು —— ಎಚ್ಚರವಾಯಿತು —— ತಲೆಗಳ ಮೇಲೆ ಟೋಪಿಗಳು —— ಉಪಾಯ ಹೊಳೆಯಿತು —— ನೆಲದ ಮೇಲೆ ಎಸೆದನು —— ನೆಲಕ್ಕೆ ಎಸೆದವು —— ಸಂತೋಷವಾಗಿ ನಡೆದನು.

* ಕೆಳಗಿನ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

ಕನ್ನಡ ಸಾಹಿತ್ಯ ಲೋಕದ ವಿಸ್ಮಯ ಎಂದು ವರ್ಣಿಸಿರುವ ಕೋಟ ಶಿವರಾಮಕಾರಂತರದು ಒಂದು ಅಸದೃಶ ಪ್ರತಿಭೆ ಅವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅಂದರೆ ಈಗಿನ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟಗ್ರಾಮದಲ್ಲಿ 1902ರ ಅಕ್ಟೋಬರ್ 10 ರಂದು ಜನಸಿದರು. ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ, ಬಾಲ್ಯದಲ್ಲಿ ಕಾರಂತರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದು ಇವರ ತಾಯಿ, ಅಜ್ಜಿ ಮತ್ತು ಹುಟ್ಟಿದ ಕೋಟಿ ಗ್ರಾಮದ ಸುಂದರ ಪರಿಸರ.

ಕಾರಂತರ ಬಾಲ್ಯದ ವಿದ್ಯಾಬ್ಯಾಸ ಕೋಟದಲ್ಲಿ ನಡೆಯಿತು. ಕಾರಂತರು ಸರಕಾರಿ ಕಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಪ್ರೌಢ ಶಿಕ್ಷಣಕ್ಕೆ ಕುಂದಾಪುರದ ಶಾಲೆಗ ಸೇರಿದರು ಕರಂತರಿಗೆ ಮೊದಲೆನಿಂದಲೂ ಪಾಠಗಳನ್ನು ಓದುವದು ಕಂಠಪಾಠ ಮಾಡುವುದೆಂದರೆ ಅಷ್ಟ–ಕಷ್ಟ ಅವರ ಮನೆಯಲ್ಲಿ ನಿತ್ಯವು ಭಾಗವತ ವಾಚನ ನಡೆಯುತ್ತಿತ್ತು. ಯಕ್ಷಗಾನ ಬಯಲಾಟಗಳು ಅವರಿಗೆ ಬಾಲ್ಯದಲ್ಲಿ ಪ್ರಿಯವಾಗಿದ್ದವು ಕುಂದಾಪುರದಲ್ಲಿ ಪ್ರೌಢ–ಶಿಕ್ಷಣ ಮುಗಿಸಿದ ನಂತರ ಕಾರಂತರು ಕಾಲೇಜು ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಶಾಲೆಯನ್ನು ಸೇರಿದರು ಕಾಲೇಜಿನ ವಾಚನಾಲಯದಲ್ಲಿ ಕಾರಂತರು ಹಲವು ಆಂಗ್ಲ ಪುಸ್ತಕಗಳನ್ನು ಓದಿದರು. ರವೀಂದ್ರನಾಥ ಟಾಗೊರರ ಬಹಳಷ್ಟು ಪುಸ್ತಕಗಳನ್ನು ಕಾರಂತರು ಓದಿ ಮುಗಿಸಿದರು ಇವುಗಳ ಪ್ರಭಾವದಿಂದ ಕಾಲೇಜಿನ ಶಿಕ್ಷಣ ಅಷ್ಟೊಂದು ರುಚಿಸಲಿಲ್ಲ.

46. ಶಿವರಾಮ ಕಾರಂತರು ಎಷ್ಟರಲ್ಲಿ ಜನಿಸಿದರು ? 1

47. ಬಾಲ್ಯದಲ್ಲಿ ಕಾರಂತರ ಮೇಲೆ ಅಚ್ಚಳಯದ ಪ್ರಭಾವ ಬೀರಿದ ಅಂಕಗಳಾವವು ? 1

48. ಕಾಂತರು ಪ್ರಾಥಮಿಕ ಶಿಕ್ಷಣವನ್ನು ಎಲ್ಲಿ ಮುಗಿಸಿದ್ದರು ? 1

49. ಕಾರಂತರಿಗೆ ಯಾವುದರಿಂದ ಕಾಲೇಜಿನ ಶಿಕ್ಷಣ ಅಷ್ಟೊಂದು ರುಚಿಸಲಿಲ್ಲ ? 1

50. ಕಾರಂತರಿಗೆ ಯಾವುದೆಂದರೆ ಅಷ್ಟಕಷ್ಟಯಾಗಿತ್ತು ? 1

* ಈ ಕೆಳಗಿನ ಕವಿತೆಗಳ ಸರಳ ಅರ್ಥ ಬರೆಯಿರಿ. 2×3=6

51. ಸಂತೆಗೆ ಹೋಗಿ ಕ್ರಮಪಡಿಸುವದಲ್ಲ

ಸಂತೆಯೋಳಗೆ ಇಟ್ಟು ಮಾರುವದಿಲ್ಲ

ಸತತ ಭಕ್ತರ ನಾಲಗೆ ಸವಿಗೊಂಬ

ಕಾಂತ ಪುರಂದರ ವಿಠಲ ನಾಮವೆಂಬ

52. ಮಲೆಗಳ ಮೊಗವೆ ಹೊರಳಿದೆ

ಕೋಕಿಲಕೆ ಸವಿ ಕೋರಲಿದೆ

ಬೇಲಿಗೂ ಹೂ ಅರಳಿದೆ

ನೆಲಕೆ ಹರಯವು ಮರಳಿದೆ

ಭೂಮಿತಾಯ್ ಒಡ ಮುರಿದು ಎದ್ದಳೋ

ಶ್ರಾವಣದ ಸಿರಿ ಬರಲಿದೆ.